## ಸ್ವೀಕೃತಿ

ಈ ಮೇಲಿನ ನೋಟಿಸ್ ಅನ್ನು ಇವರಿಗೆ ..................................... ಈ ದಿನಾಂಕ ................. ನೀಡಲಾಗಿದೆ ಮತ್ತು ಅದಕ್ಕಾಗಿ ಈ ಸ್ವೀಕೃತಿ ಪಡೆಯಲಾಗಿದೆ.

| | |
|---|---|
| ಹೆಸರು:<br>ಹುದ್ದೆ:<br>ಮೊಬೈಲ್ ಸಂ:<br>ಇಮೇಲ್ ಐಡಿ:<br>ಸಹಿ: | ಬೀಟ್ ಪೊಲೀಸ್ ಹೆಸರು:<br>ಹುದ್ದೆ:<br>ಮೊಬೈಲ್ ಸಂ.<br>ಸಹಿ. |

(ರಶೀದಿಯನ್ನು ಠಾಣೆಯಲ್ಲಿ ಇರಿಸಬೇಕು ಮತ್ತು ನೋಟಿಸ್ ನೀಡಿರುವ ಬಗೆಗಿನ ವಿವರಗಳನ್ನು ಪ್ರತಿದಿನವೂ ಆಯುಕ್ತರು, ಬೆಂಗಳೂರು ಪೊಲೀಸ್/ಎಸ್.ಪಿ. ಬೆಂಗಳೂರು ಗ್ರಾಮೀಣ ಇವರಿಗೆ ಕಳುಹಿಸಬೇಕು)

---

## ಅನುಬಂಧ–1

### (ನೆರೆಹೊರೆಯವರು / ಅಪಾರ್ಟಮೆಂಟ್ ಮಾಲೀಕರ ಸಂಘಟನೆಗಳ ಕಾರ್ಯದರ್ಶಿ)

ಇವರಿಗೆ,

____________________________

____________________________

____________________________

ಬೆಂಗಳೂರು

ವಿಷಯ: ನಿಮ್ಮ ನೆರೆಹೊರೆ/ಅಪಾರ್ಟಮೆಂಟ್ ನಲ್ಲಿ ಗೃಹ ಕ್ವಾರಂಟೀನ್ ನಲ್ಲಿ ಇರುವ ಅಂತಾರಾಷ್ಟ್ರೀಯ ಪ್ರಯಾಣಿಕರ ಬಗೆಗಿನ ಮಾಹಿತಿ.

\- - -

ಭಾರತವೂ ಸೇರಿದಂತೆ ಈ ವರೆಗೆ 150ಕ್ಕೂ ಹೆಚ್ಚು ರಾಷ್ಟ್ರಗಳು ಮತ್ತು ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕೊರೊನಾ ವೈರಸ್ (ಕೋವಿಡ್–19) ಅನ್ನು ವಿಶ್ವ ಆರೋಗ್ಯ ಸಂಸ್ಥೆ (**WHO**)ಯು ಅಂತಾರಾಷ್ಟ್ರೀಯ ಕಳಕಳಿಯ ಸಾರ್ವಜನಿಕ ತುರ್ತುಸ್ಥಿತಿ (**PHEIC**) ಎಂದು ಘೋಷಿಸಿದೆ. 2020ರ ಮಾರ್ಚ್ 11ರಂದು ಕೋವಿಡ್–19 ಅನ್ನು ಸರ್ವವ್ಯಾಪಿ ಎಂದು **WHO** ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಈ ರೋಗವು ಹರಡುವ ಎಲ್ಲ ಸಾಧ್ಯತೆಗಳನ್ನು ತಡೆಯಲು ಮತ್ತು ಕಣ್ಗಾವಲನ್ನು ಬಲಪಡಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ.

ಈ ವೈರಸ್ ಹರಡದಂತೆ ತಡೆಯಲು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಮತ್ತು ಸೋಂಕು ಪ್ರಸರಣದ ಸರಪಣಿಯನ್ನು ಮುರಿಯುವುದು ಈಗಿರುವ ಏಕೈಕ ಪರಿಹಾರವಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ದಾಖಲೆಗಳ ಪ್ರಕಾರ ಈ ಕೆಳಗಿನ ವ್ಯಕ್ತಿಗಳು ಕೋವಿಡ್–19 ಬಾಧಿತ ರಾಷ್ಟ್ರಗಳಿಂದ ರಾಜ್ಯವನ್ನು ಪ್ರವೇಶ ಮಾಡಿದ್ದು ಅವರಿಗೆ ಗೃಹ ಕ್ವಾರಂಟೀನ್ (ಗೃಹ ಸಂಪರ್ಕ ನಿರ್ಬಂಧ)ಗೆ ಸಲಹೆ ನೀಡಲಾಗಿದೆ.

| ಕ್ರ. ಸಂ. | ವ್ಯಕ್ತಿಯ ಹೆಸರು | ಆಗಮಿಸಿದ ದಿನಾಂಕ | ಭೇಟಿ ನೀಡಿದ ದೇಶ | ವಿಳಾಸ | ಮೊಬೈಲ್ ಸಂಖ್ಯೆ |
|---|---|---|---|---|---|
| | | | | | |
| | | | | | |

ಈ ದೇಶಕ್ಕೆ ಆಗಮಿಸಿದ ದಿನಾಂಕದಿಂದ 14 ದಿನಗಳ ಕಾಲ ಗೃಹ ಸಂಪರ್ಕ ನಿರ್ಬಂಧದಲ್ಲಿ ಇರುವಂತೆ ಈ ಮೇಲಿನ ವ್ಯಕ್ತಿಗಳಿಗೆ ಸಲಹೆ ನೀಡಲಾಗಿದೆ.

ಗೃಹ ಸಂಪರ್ಕ ನಿರ್ಬಂಧದ ಪ್ರಮುಖ ಅಂಶಗಳು ಹೀಗಿವೆ:

1. ವ್ಯಕ್ತಿಯು ಉತ್ತಮ ಗಾಳಿ–ಬೆಳಕಿನ ವ್ಯವಸ್ಥೆಯ ಒಂದೇ ಕೊಠಡಿಯಲ್ಲಿ ವಾಸ ಮಾಡಬೇಕು ಮತ್ತು ಕುಟುಂಬ ಸದಸ್ಯರು ಹಾಗೂ ಇತರರಿಂದ ಕನಿಷ್ಠ ಒಂದು ಮೀಟರ್ ಅಂತರವನ್ನು ಕಾಯ್ದುಕೊಳ್ಳಬೇಕು.
2. ಸೋಪ್ ಮತ್ತು ನೀರನ್ನು ಬಳಸಿ ಕೈಗಳನ್ನು ಚೆನ್ನಾಗಿ ತೊಳೆಯಬೇಕು.
3. ಮನೆಯಲ್ಲಿ ಆತ/ಆಕೆ ಓಡಾಡದಂತೆ ನಿರ್ಬಂಧ ವಿಧಿಸಬೇಕು. ಮನೆಯಿಂದ ಆತ/ಆಕೆ ಹೊರಗೆ ಬರುವಂತಿಲ್ಲ.
4. ಎಲ್ಲ ಕಾಲಕ್ಕೂ ಮೂರು ಪದರಗಳಿರುವ ಸರ್ಜಿಕಲ್ ಮಾಸ್ಕ್ ಧರಿಸಬೇಕು. ಪ್ರತಿ 6 ರಿಂದ 8 ಗಂಟೆಗಳಿಗೊಮ್ಮೆ ಮಾಸ್ಕ್ ಬದಲಿಸಬೇಕು. ಸಾಧಾರಣ ಬ್ಲೀಚ್ ಸೊಲ್ಯೂಷನ್ (ಶೇ.5) ಅಥವಾ ಸೋಡಿಯಂ ಹೈಪೋಕ್ಲೋರೈಟ್ ಸೊಲ್ಯೂಷನ್ ನಿಂದ (1%) ಬಳಸಿದ ಮಾಸ್ಕ್‌ನ ಸೋಂಕು ನಿವಾರಣೆ ಮಾಡಬೇಕು. ಆ ಬಳಿಕ ಅದನ್ನು ಸಂಪೂರ್ಣವಾಗಿ ಸುಟ್ಟು ಹಾಕಬೇಕು.
5. ಸದರಿ ವ್ಯಕ್ತಿಯು ವಯಸ್ಸಾದವರಿಂದ, ಗರ್ಭಿಣಿಯರಿಂದ, ಮಕ್ಕಳಿಂದ ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಅಂಗಾಂಗ ಕಸಿ ಮಾಡಿಸಿಕೊಂಡ ವ್ಯಕ್ತಿ ಮೊದಲಾದ ಅನಾರೋಗ್ಯದಿಂದ ಬಳಲುತ್ತಿರುವವರಿಂದ ದೂರ ಇರಬೇಕು.
6. ಯಾವುದೇ ಸಾಮಾಜಿಕ/ ಧಾರ್ಮಿಕ ಕಾರ್ಯಕ್ರಮಗಳಿಂದ ಕಡ್ಡಾಯವಾಗಿ ದೂರ ಇರಬೇಕು.

ಮೇಲಿನ ವ್ಯಕ್ತಿಯ ಚಲನವಲನದ ಮೇಲೆ ಕಣ್ಣಿಡುವ ಮೂಲಕ ಕೋವಿಡ್–19 ಹರಡದಂತೆ ಸಮರ ಸಾರಿರುವ ರಾಜ್ಯ ಸರ್ಕಾರದ ಜೊತೆ ಕೈಜೋಡಿಸಬೇಕು ಎಂದು ಕೇಳಿಕೊಳ್ಳುತ್ತೇವೆ. **ಒಂದು ವೇಳೆ ಮೇಲೆ ಪ್ರಸ್ತಾಪಿಸಲಾದ ವ್ಯಕ್ತಿಯು ಗೃಹ ಕ್ವಾರಂಟೀನ್ ನಿಯಮಗಳನ್ನು ಉಲ್ಲಂಘಿಸಿದರೆ ಅವರಿಗೆ ಹಾಗೆ ಮಾಡದಂತೆ ಸಲಹೆ ಮಾಡಬೇಕು. ನಿಮ್ಮ ಮನವೊಲಿಕೆಗೆ ಅವರು ಮಣಿಯದೇ ಇದ್ದರೆ ಈ ಮುಂದಿನ ಉಚಿತ ಸಹಾಯವಾಣಿಗೆ ಸಂಖ್ಯೆಗಳಿಗೆ ಕರೆ ಮಾಡಲು ಮನವಿ ಮಾಡಿಕೊಳ್ಳಲಾಗಿದೆ. 104 ಅಥವಾ 080–46848600 ಅಥವಾ 080–66692000.**

**ಕೋವಿಡ್–19 ವಿರುದ್ಧ ನಾವು ಸಾರಿರುವ ಸಮರಕ್ಕೆ ನೀವೂ ಸಹಕಾರ ನೀಡಿ.**

ನಿರ್ದೇಶಕರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

## ಅನುಬಂಧ-2
## (ಗೃಹ ಕ್ವಾರಂಟೀನ್ ನಲ್ಲಿ ಇರುವ ವ್ಯಕ್ತಿಗೆ ನೋಟಿಸ್)

ಇವರಿಗೆ,

____________________________

____________________________

____________________________

ಬೆಂಗಳೂರು

**ವಿಷಯ: ಗೃಹ ಕ್ವಾರಂಟೀನ್ ನಲ್ಲಿರುವವರಿಗೆ ಸಲಹೆ–**

ಭಾರತವೂ ಸೇರಿದಂತೆ ಈ ವರೆಗೆ **150ಕ್ಕೂ ಹೆಚ್ಚು ರಾಷ್ಟ್ರಗಳು ಮತ್ತು ಪ್ರದೇಶಗಳನ್ನು** ಬಾಧಿಸಿರುವ ಇತ್ತೀಚಿನ ನೋವೆಲ್ ಕೊರೊನಾ ವೈರಸ್ (ಕೋವಿಡ್–19) ಅನ್ನು ವಿಶ್ವ ಆರೋಗ್ಯ ಸಂಸ್ಥೆ **(WHO)ಯು ಅಂತಾರಾಷ್ಟ್ರೀಯ ಅತಂಕದ ಸಾರ್ವಜನಿಕ ತುರ್ತುಸ್ಥಿತಿ (PHEIC)** ಎಂದು ಘೋಷಿಸಿದೆ. 2020ರ ಮಾರ್ಚ್ 11ರಂದು ಕೋವಿಡ್–19 ಅನ್ನು **ಜಾಗತಿಕ ಸಾಂಕ್ರಾಮಿಕ** ಎಂದು **WHO** ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಈ ರೋಗವು ಹರಡುವ ಎಲ್ಲ ಸಾಧ್ಯತೆಗಳನ್ನು ತಡೆಯಲು ಮತ್ತು ಕಣ್ಗಾವಲನ್ನು ಬಲಪಡಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ.

ಈ ವೈರಸ್ ಹರಡದಂತೆ ತಡೆಯಲು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಮತ್ತು ಸೋಂಕು ಪ್ರಸರಣದ ಸರಪಣಿಯನ್ನು ಮುರಿಯುವುದು ಈಗಿರುವ ಏಕೈಕ ಪರಿಹಾರವಾಗಿದೆ.

**ದೇಶಕ್ಕೆ ಆಗಮಿಸಿದ ದಿನಾಂಕದಿಂದ 14 ದಿನಗಳ ಕಾಲ ಗೃಹ ಸಂಪರ್ಕ ನಿರ್ಬಂಧದಲ್ಲಿ ಇರುವಂತೆ ಈ ಮೇಲಿನ ವ್ಯಕ್ತಿಗಳಿಗೆ ಸಲಹೆ ನೀಡಲಾಗಿದೆ.** ಗೃಹ ಸಂಪರ್ಕ ನಿರ್ಬಂಧದ ಪ್ರಮುಖ ಅಂಶಗಳು ಕೆಳಕಂಡತಿದೆ:

1. ವ್ಯಕ್ತಿಯು ಉತ್ತಮ ಗಾಳಿ–ಬೆಳಕಿನ ವ್ಯವಸ್ಥೆಯ ಒಂದೇ ಕೊಠಡಿಯಲ್ಲಿ ವಾಸ ಮಾಡಬೇಕು ಮತ್ತು ಕುಟುಂಬ ಸದಸ್ಯರು ಹಾಗೂ ಇತರರಿಂದ ಕನಿಷ್ಠ ಒಂದು ಮೀಟರ್ ಅಂತರವನ್ನು ಕಾಯ್ದುಕೊಳ್ಳಬೇಕು.
2. ಸೋಪ್ ಮತ್ತು ನೀರನ್ನು ಬಳಸಿ ಕೈಗಳನ್ನು ಚೆನ್ನಾಗಿ ತೊಳೆಯಬೇಕು.
3. ಮನೆಯಲ್ಲಿ ಆತ/ಆಕೆ ಓಡಾಡದಂತೆ ನಿರ್ಬಂಧ ವಿಧಿಸಬೇಕು. ಮನೆಯಿಂದ ಆತ/ಆಕೆ ಹೊರಗೆ ಬರುವಂತಿಲ್ಲ.
4. ಎಲ್ಲ ಕಾಲಕ್ಕೂ ಮೂರು ಪದರಗಳಿರವ ಸರ್ಜಿಕಲ್ ಮಾಸ್ಕ್ ಧರಿಸಿ. ಪ್ರತಿ 6 ರಿಂದ 8 ಗಂಟೆಗಳಿಗೊಮ್ಮೆ ಮಾಸ್ಕ್ ಬದಲಿಸಬೇಕು. ಸಾಧಾರಣ ಬ್ಲೀಚ್ ಸೊಲ್ಯೂಷನ್ (ಶೇ.5) ಅಥವಾ ಸೋಡಿಯಂ ಹೈಪೋಕ್ಲೋರೈಟ್ ಸೊಲ್ಯೂಷನ್ ನಿಂದ (1%) ಬಳಸಿದ ಮಾಸ್ಕ್‌ನ ಸೋಂಕು ನಿವಾರಣೆ ಮಾಡಬೇಕು. ಆ ಬಳಿಕ ಅದನ್ನು ಸಂಪೂರ್ಣವಾಗಿ ಸುಟ್ಟು ಹಾಕಬೇಕು.
5. ಸದರಿ ವ್ಯಕ್ತಿಯು ಹಿರಿಯರಿಂದ, ಗರ್ಭಿಣಿಯರಿಂದ, ಮಕ್ಕಳಿಂದ ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಅಂಗಾಂಗ ಕಸಿ ಮಾಡಿಸಿಕೊಂಡ ವ್ಯಕ್ತಿ ಮೊದಲಾದ ಅನಾರೋಗ್ಯದಿಂದ ಬಳಲುತ್ತಿರುವವರಿಂದ ದೂರ ಇರಬೇಕು.
6. ಯಾವುದೇ ಸಾಮಾಜಿಕ/ ಧಾರ್ಮಿಕ ಕಾರ್ಯಕ್ರಮಗಳಿಂದ ಕಡ್ಡಾಯವಾಗಿ ದೂರ ಇರಬೇಕು.

ನೀವು ಈ ಗೃಹ ಕ್ವಾರಂಟೀನ್ ಅವಧಿಯನ್ನು ಪೂರ್ಣಗೊಳಿಸಲು ಈ ಮೂಲಕ ಮನವಿ ಮಾಡಿಕೊಳ್ಳಲಾಗಿದೆ. ಒಂದು ವೇಳೆ ನಿಮ್ಮಲ್ಲಿ ಶೀತ, ಕೆಮ್ಮು, ಜ್ವರ ಮತ್ತು ಉಸಿರಾಟದ ತೊಂದರೆ ಕಂಡುಬಂದಲ್ಲಿ ತಕ್ಷಣ ಈ ಮುಂದಿನ ಉಚಿತ ಸಹಾಯವಾಣಿಗೆ ಕರೆ ಮಾಡಲು ಮತ್ತೊಮ್ಮೆ ಮನವಿ ಮಾಡಿಕೊಳ್ಳಲಾಗಿದೆ: 104 ಅಥವಾ 080–46848600 ಅಥವಾ 080–66692000.

**ಗೃಹ ಸಂಪರ್ಕನಿರ್ಬಂದದಲ್ಲಿ ಇರಲು ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಐಪಿಸಿ, ಸಾಂಕ್ರಾಮಿಕ ರೋಗ ಕಾಯ್ದೆ ಇತ್ಯಾದಿಯ ನಾನಾ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲು ದಾರಿ ಮಾಡಿಕೊಟ್ಟಂತಾಗುತ್ತದೆ.**

**ಕೋವಿಡ್–19 ವಿರುದ್ಧ ನಾವು ಸಾರಿರುವ ಸಮರಕ್ಕೆ ನೀವೂ ಸಹಕಾರ ನೀಡಿ.**

ONPatil

ನಿರ್ದೇಶಕರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು